


'ಮಾಂಟೊ' ಚಿತ್ರದ ನಿರ್ದೇಶಕಿ ನಂದಿತಾ ದಾಸ್



ಕುಮಾರ್, 'ನಾನು ಹೇಳಿರಲಿಲ್ಲವೇ, ನಾನಿದೀನಿ ಹೆದರಬೇಡ ಅಂತ' ಎನ್ನುವ ಮಾತು ಸಾಮರಸ್ಯದ ಒಳ ಸೂಕ್ಷ್ಮವನ್ನು ನಿರೂಪಿಸಿದಂತೆನಿಸುತ್ತದೆ. ಶ್ಯಾಂ ಜೊತೆ ಪ್ರಯಾಣಿಸುವಾಗ 'ಇನ್ ಮುಸಲ್ಮಾನೋಂಕೊ ಮಾರ್‌ದೇನಾ ಚಾಹಿಯೆ' (ಈ ಮುಸ್ಲಿಮರನ್ನು ಸಾಯಿಸಬೇಕು) ಎನ್ನುವ ಸಂಯಮ ಕಳಕೊಂಡ ಶ್ಯಾಂನ ಮಾತುಗಳಿಗೆ ಕಿವಿಯಾದ ಮಾಂಟೊ ಪಾಕಿಸ್ತಾನಕ್ಕೆ ಹೋಗಲು ನಿರ್ಧರಿಸುವುದು ಪರಿಸ್ಥಿತಿಯ ಒತ್ತಡ ಸೂಚಿಸುತ್ತದೆ. 'ಸದಾ ಕೈಯಲ್ಲಿ ಶರಾಬು ಬೋತಲ್ ಹಿಡಿವ ನೀನೆಂಥ ಮುಸಲ್ಮಾನ' ಎನ್ನುವ ಶ್ಯಾಂನ ನೇರ ಮಾತು ಮಾಂಟೊನನ್ನು ಕೆಣಕುತ್ತದೆ. 'ಸಾಯಿಸುವುದಕ್ಕೆ ನಾನು ಮುಸ್ಲಿಂ ಎನ್ನುವುದಷ್ಟೇ ಸಾಕಲ್ಲವೇ?' ಎನ್ನುತ್ತ ದೇಶ ತೊರೆವ ನಿರ್ಧಾರ ಗಟ್ಟಿಗೊಳಿಸುತ್ತಾನೆ. ಇವೆರಡೂ ಚಿತ್ರಣಗಳು ಉಪಖಂಡದ ಆ ಕ್ಷಣದ ವಾಸ್ತವದಂತೆ ನಿರೂಪಿಸಲ್ಪಟ್ಟಿವೆ.

'ಖೋಲ್‌ದೋ', 'ಥಂಡಾ ಘೋಶ್' ಮತ್ತು 'ತೊಬತೇಕ್ ಸಿಂಗ್' ಪರಿಣಾಮಕಾರಿಯಾಗಿ ಮೂಡಿವೆ. 'ಥಂಡಾ ಘೋಶ್' ಮನಮಿಡಿಯುವಂತೆ ಮಾಡುತ್ತದೆ. ಈಶ್ವರ್ ಸಿಂಗ್ ಮತ್ತು ಕುಲವಂತ್ ಕೌರ್ ಜೋಡಿ ನಡುವಣ ಕಥನವಿದು. ಈಶ್ವರ್‌ಸಿಂಗ್ ದಂಗೆಯ ಲಾಭ ಪಡೆದುಕೊಳ್ಳುವ ಚೋರ. ಲೂಟಿಗೆಂದು ಹೋದವ ವಾಪಸ್ ಆಗಿ ತನ್ನ ಹೆಂಗಸಿನೊಂದಿಗೆ ನಡೆದ ಜಟಾಪಟಿಯಲ್ಲಿ ಕತೆ ಬಿಚ್ಚಿಕೊಳ್ಳುತ್ತದೆ. ಹೆಂಡತಿಯ ಬಿಗಿದಪ್ಪಿ ಭೋರ್ಗರೆವ ಈಶ್ವರ್ ಸಿಂಗ್ ಇಂದೇಕೋ ಖಾಲಿ ಅನಿಸುತ್ತಿದ್ದಾನೆ! ಇಷ್ಟು ದಣಿದಂತಿರಲು ಪರಸಂಗವೇ ಕಾರಣ ಎನ್ನುವ ಗುಮಾನಿ ಮಾದಕ ಚೆಲುವಿನ ಕಟ್ಟುಮಸ್ತು ಹೆಂಗಸು ಕುಲವಂತ್ ಕೌರ್‌ದು. ಅವಳ ಒತ್ತಡಕ್ಕೆ ಈಶ್ವರ್ ಸಿಂಗ್ ಬಾಯಿ ಬಿಡುತ್ತಾನೆ. ಆರು ಜನರನ್ನು ಒಂದು ಕೋಣೆಯಲ್ಲಿ ಕಂಡು ಅದರಲ್ಲಿ ನಾಲ್ವರನ್ನು ಹೊಡೆದುರುಳಿಸಿ ಸುಂದರ ಹುಡುಗಿಯ ದೇಹ ಹೊತ್ತು ಮರದ ಕೆಳಗೆ ಮಲಗಿಸಿದಾಗ ಮನದಲ್ಲಿ ಹೊಯ್ದಾಟವಾದ ಪರಿಯನ್ನು ವಿವರಿಸತೊಡಗುತ್ತಾನೆ. 'ಅಂಥ ಸುಂದರ ಹೆಣ್ಣು ನಾನಿದುವರೆಗೂ ಕಂಡಿಲ್ಲ' ಎನ್ನುವ ಅವನ ಮಾತಿಗೆ ಕೋಪಗೊಂಡ ಕೌರ್ ಆತನ ಕತ್ತನ್ನೇ ಅರ್ಧ ಸೀಳುತ್ತಾಳೆ. ಗಂಟಲು ಆರಿದಂಥ ದನಿಯಲ್ಲಿ 'ಆ ಸುಂದರ ಹೆಣ್ಣನ್ನು ಭೋಗಿಸಲು ಮೈಮೇಲಿನ ದುಪ್ಪಟ್ಟಾ ತೆಗೆದು ಕಮೀಜ್‌ನ ಲಾಡಿ ಬಿಚ್ಚಿದೆ.. ಆದರೆ, ಅದೊಂದು ತಣ್ಣಗಿನ ಮಾಂಸದ ಮುದ್ದೆ. ಆಕೆ ಸತ್ತಿದ್ದಳು ಕೌರ್..' ಎಂದು ಕಣ್ಮುಚ್ಚುವ ಈಶ್ವರ್ ಸಿಂಗ್, ಕಡೆಯ ಉಸಿರಿನ ಕ್ಷಣದಲ್ಲೂ ಆತನಿಗೆ ತನ್ನದು ಅಸಹ್ಯಕರ, ಅನೈತಿಕ ನಡೆ ಎನ್ನುವ ಪಶ್ಚಾತಾಪ! ಈ ದೃಶ್ಯ ಚಿತ್ರವನ್ನು ಗಾಢಗೊಳಿಸುತ್ತದೆ.

ಇಂಥ ಕತೆಗಳಿಂದಲೇ ಮಾಂಟೊ ಸಾಹಿತ್ಯಲೋಕವನ್ನು ತಲ್ಲಣಗೊಳಿಸಿದ್ದು. ಪಾಕಿಸ್ತಾನ ಸರ್ಕಾರ ಮತ್ತು ಸಾಹಿತ್ಯ ಲೋಕ ಆತನ ಕೋರ್ಟಿಗೂ ಎಳೆಯುತ್ತವೆ. ಕೋರ್ಟ್ ದೃಶ್ಯದಲ್ಲಿ ಮಾಂಟೊ ಸಮರ್ಥಿಸಿಕೊಳ್ಳುವ ಪರಿ ಲೇಖಕನೊಬ್ಬನ ಜವಾಬ್ದಾರಿಯುತ ನಡೆಗೆ ಸಾಕ್ಷಿಯಂತೆನಿಸುತ್ತದೆ. ಲೇಖಕ ಸಮಾಜದ ವಿಕಾರವನ್ನು ನಗ್ನಗೊಳಿಸಿ ಸಾಹಿತ್ಯವಾಗಿಸುವುದು ಅಪರಾಧ ಎನ್ನುವುದಾದರೆ ಸಾಹಿತ್ಯ ಯಾರನ್ನೋ ಮೆಚ್ಚಿಸುವ, ರಂಜಿಸುವ ಸಾಧನವಷ್ಟೇ ಎನ್ನುವುದು ಆತನ ವಾದ. ಬೀದಿಗಳಲ್ಲಿ ಜನಸಾಮಾನ್ಯ ಸಿಟ್ಟು, ಹತಾಶೆಗೆ ಬಳಸುವ ಭಾಷೆ ಸಮಾಜದ ಭಾಗವಲ್ಲವೇ? ಖಾಯಂ ಕತ್ತಲು ಪ್ರದೇಶದಲ್ಲಿರುವ ಜೋಪಡಿವಾಸಿಗಳು, ನಿರ್ಗತಿಕರು, ಹುಚ್ಚರು, ವೇಶ್ಯೆಯರು, ಲಂಪಟರು, ಕಳ್ಳರು, ರೌಡಿಗಳು... ಇವರಲ್ಲೂ ಬದುಕಿನ ಅಸಲಿ ಬೆಳಕಿನೆಡೆಗಿನ ಕನಸುಗಳಿವೆ. ಅವು ಮಾನವೀಯ ತುಡಿತವಾಗಲು ಯೋಗ್ಯವಲ್ಲವೇ?

ದೌಲತ್ತು, ಸೌಂದರ್ಯವಷ್ಟೇ ಬದುಕಿನ ಅಸಲಿಯತ್ತುಗಳಲ್ಲ. ಇವುಗಳಿಂದ ವಂಚಿತ ಸಾಮಾನ್ಯರು ಸಮಾಜದಿಂದ ಹೊರಕ್ಕಿಟ್ಟು ನೋಡುವಂಥ ವಿಕಾರ ಸೃಷ್ಟಿಗಳೇ? ಬಡವನ ಸಿಟ್ಟಿನಲ್ಲಿ ಸಿರಿವಂತನ ಅಟ್ಟಹಾಸ ಕಾಣಬಹುದಲ್ಲ! ನಿರ್ಗತಿಕರು ಮೈಮಾರಿ ಬದುಕುವುದು ಸಮಾಜಕ್ಕೆ ಸಹಜವೇನು? ಇಂಥವರ ನೋವುಗಳನ್ನು ದಾಖಲಿಸುವ ಲೇಖಕ ಹೇಗೆ ಅಶ್ಲೀಲವಾಗುತ್ತಾನೆ? ಅಂಥ ಅಭಿವ್ಯಕ್ತಿ ಹೇಗೆ ಅಶ್ಲೀಲ ಸಾಹಿತ್ಯವಾಗುತ್ತದೆ? ಒಂದು ದೇಶ ಎಲ್ಲರನ್ನು ಸಮಾನವಾಗಿ ಕಾಣದಿರುವುದು ಯಾವ ನಾಗರಿಕತೆ? – ಇಂಥ ಅಸಂಖ್ಯ ಗಾಯಗಳನ್ನು ಕೆದಕುತ್ತ ಸಮಾಜವನ್ನು, ವ್ಯವಸ್ಥೆಯನ್ನು ಪ್ರಶ್ನಿಸಿದ ಲೇಖಕ ಮಾಂಟೊ ನೆಲದ ನಿಜ ಸಾಕ್ಷಿಪ್ರಜ್ಞೆ.

ಮಾತೃಭಾಷೆ ಉರ್ದುವಿನ ಆಡು ಮಾತಿನ ಲಯಕ್ಕೆ ಮನಸೋತ ಮಾಂಟೊ, ಭಾಷೆಯೊಂದು ವ್ಯಾಕರಣ, ಶಿಷ್ಟ ಪರಂಪರೆಗೆ ಸೀಮಿತಗೊಳ್ಳಬೇಕಿಲ್ಲ ಎನ್ನುತ್ತಾನೆ. ತಾನು ಬಳಸಿದ ತಳಮಳ ಸೂಚಿಸುವ ಬೈಗುಳಗಳು ಭಾಷೆಯ ಭಾಗ ಎನ್ನುವುದು ಮಾಂಟೊ ನಂಬಿಕೆ. 'ಥಂಡಾ ಘೋಶ್' ಪಾಕಿಸ್ತಾನದಲ್ಲಿ ನಿಷೇಧಿಸಲ್ಪಟ್ಟಿತು. ಕೋರ್ಟ್ ವಿಚಾರಣೆಯ ಸಂದರ್ಭದಲ್ಲಿ ಸಮಕಾಲೀನ ಲೇಖಕರನ್ನು ಮಾಂಟೊ ಎದುರು ಹಾಕಿಕೊಳ್ಳಬೇಕಾಯಿತು. ಫೈಜ್ ಅಹ್ಮದ್ ಫೈಜ್, ಇಸ್ಮತ್ ಚುಗ್ತಾಯಿ, ಅಹ್ಮದ್ ನದೀಂ ಕಾಸ್ಮಿ ಅವರಂಥ ಘಟಾನುಘಟಿ ಲೇಖಕರು ಮಾಂಟೊ ಬೆನ್ನಿಗೆ ನಿಲ್ಲುವುದಿಲ್ಲ. ನಿಂತವರು ಆ ಕಾಲದ ಲೇಖಕ ಅಬೀದ್ ಅಲಿ ಅಬೀದ್ (ಜಾವೇದ್ ಅಖ್ತರ್) ಮಾತ್ರ. ಸಮಾಜದಲ್ಲಿ ತಲ್ಲಣವನ್ನುಂಟು ಮಾಡಬಲ್ಲ ಸಾಹಿತ್ಯವನ್ನು ಸಮಕಾಲೀನ ಲೇಖಕರು ಸಾಹಿತ್ಯಕ ಮಾನದಂಡಗಳಲ್ಲಿ ಒಪ್ಪಿಕೊಳ್ಳಲು ಹಿಂಜರಿದಿದ್ದು ಮಾಂಟೊಗೆ ದೊಡ್ಡ ಕಸಿವಿಸಿ.

ಸಾಧಾರಣ ಕಾಗದದ ಮೇಲೆ ಪೆನ್ಸಿಲ್‌ನಿಂದ ಬರೆದ ಅವರ ಕತೆಗಳು ಉರ್ದು ಅಖಬಾರುಗಳಲ್ಲಿ ದಂಡಿಯಾಗಿ ಪ್ರಕಟಗೊಂಡವು. ಸಂಭಾವನೆ ಮಾತು ಬಂದಾಗ ಅಸಡ್ಡೆ. ಮಾಂಟೊ ಒಮ್ಮೆ ಪತ್ರಿಕಾ ಕಾರ್ಯಾಲಯಕ್ಕೆ ತೆರಳಿ ಹಸ್ತಪ್ರತಿಯನ್ನು ವಾಪಸ್ ಪಡೆದು ಸಂಪಾದಕನ ಮುಖಕ್ಕೆ ಹರಿದು ಬಿಸಾಕುವ ದೃಶ್ಯ ಕರುಳು ಹಿಂಡುವಂಥದು. ಬೀದಿಯ ಗೂಡಂಗಡಿಗಳಲ್ಲಿ ಜನ ಚಹ ಹೀರುತ್ತ ಮಾಂಟೊ ಕತೆಗಳನ್ನು ಜೋರಾಗಿ ಓದಿಕೊಂಡು ಅವುಗಳೊಳಗಿನ ಗೂಢಾರ್ಥಗಳನ್ನು ಅನುಭವಿಸುತ್ತಿದ್ದ ರೀತಿ ಸಾಂಸ್ಕೃತಿಕ ಸಮೃದ್ಧಿಯ ನಾಗರಿಕತೆ ಸೂಚಿಸುವಂಥದು. ಇಂಥ ದೃಶ್ಯಗಳಲ್ಲಿ ಆಗಿನ ಮುಂಬೈ, ಲಾಹೋರ್ ನಾಗರಿಕತೆಯ ಝಲಕ್ ಕಟ್ಟಿಕೊಟ್ಟಿದ್ದು, ನಿರ್ದೇಶಕಿ ಮತ್ತವರ ತಂತ್ರಜ್ಞರು ಅನುಸರಿಸಿದ ಡೀಟೇಲಿಂಗ್ ತಂತ್ರಕ್ಕೆ ಸಾಕ್ಷಿ. ನಿರೂಪಣೆಯಲ್ಲಿನ ಮಂದ ಗತಿಯಿಂದ ಕೆಲವು ಡೀಟೇಲ್‌ಗಳು ಪರಿಣಾಮ ಬೀರುವಲ್ಲಿ ಎಡವಿದ್ದು ಸ್ಪಷ್ಟ.

ಲಾಹೋರಿನಲ್ಲಿ ಜನಸಾಮಾನ್ಯರ ಲೇಖಕನಾಗಿದ್ದ ಮಾಂಟೊ ನಾಜೂಕು ಶಾಹೀರ್‌ಗಳ ಸಾಲಿನಲ್ಲಿ ಗುರುತಿಸಿಕೊಳ್ಳಲಾಗಲಿಲ್ಲ. ಮುಂಬೈ ಮತ್ತೆ ಕೈಬೀಸಿ ಕರೆಯಿತು. ಸ್ಲಂ ಕತ್ತಲ ಜಗತ್ತು ಸೆಳೆಯಿತು. ಕಿರು ಸಂಧಿಗಳು, ಅಸ್ಪಷ್ಟ ಮುಖಗಳು, ಅಸ್ತವ್ಯಸ್ತ ಬದುಕಿನ ನೈಜ ಚಿತ್ರಣಗಳು ಬಿಡದೇ ಕಾಡಿದವು. ಅವೆಲ್ಲ ಕಥಾಲೋಕದ ಅನನ್ಯ ಮೆಟಫರ್‌ಗಳಾದವು. ಇದೆಲ್ಲ ಸತ್ಯದ ಅನಾವರಣ ಎಂದೇ ಮಾಂಟೊ ನಂಬಿದ್ದರು.

ಲಾಹೋರ್ ಹುಚ್ಚಾಸ್ಪತ್ರೆಯ ಹುಚ್ಚರನ್ನೂ ವಿಭಜಿಸುವ ಯತ್ನದಂಥ ಕಥನದ ಮೂಲಕ ವಿಭಜನೆಯನ್ನು ನೇರ ಲೇವಡಿಗೊಳಪಡಿಸುವ 'ತೊಬತೇಕ್‌ಸಿಂಗ್' ಕತೆಯಲ್ಲಿನ ಸರ್ದಾರ್ಜಿ ಗಡಿಯಲ್ಲಿ ತಾನು ಸೇರಬೇಕಾದ ಹಳ್ಳಿ, ವಿಳಾಸಕ್ಕೆ ತಡಕಾಡಿ ನೆಟ್ಟ ತಂತಿಬೇಲಿಗಳ ನಡುವಿನ ನೋಮ್ಯಾನ್ಸ್ ಲ್ಯಾಂಡ್‌ನಲ್ಲಿ ಸಾಯುವ ಚಿತ್ರಣದೊಂದಿಗೆ ಉಪಖಂಡದ ಚರಿತ್ರೆಯಲ್ಲಿನ ವಿಭಜನೆ ಎನ್ನುವ ಮಾಸದ ಗಾಯವನ್ನು ಮತ್ತೆ ನೆನಪಿಸುವ ಪ್ರಯತ್ನದ ಮೂಲಕ ನಂದಿತಾ ದಾಸ್ ಚಿತ್ರ ಮುಗಿಸುತ್ತಾರೆ. ಅಭಿನಯದಲ್ಲಿ ನವಾಜುದ್ದೀನ್ ಸಿದ್ದಿಕಿ ಅಕ್ಷರಶಃ ಮಾಂಟೊ ಆಗಿ ಎಲ್ಲೋ ಒಂದೆಡೆ ಪಾತ್ರವನ್ನೇ ನುಂಗಲು ಯತ್ನಿಸಿದಂತೆನಿಸುತ್ತದೆ. ಸಿನಿಮಾದಾಚೆಗೂ ಉಪಖಂಡದ ಮಣ್ಣಿನ ಚರಿತ್ರೆಗೆ ಗ್ರಾಫೈಟ್ ಮತ್ತು ಮಣ್ಣಿನ ಹುಡಿ ಮಿಶ್ರಣದ ಪೆನ್ಸಿಲ್‌ನಿಂದ ಕಾಗದದ ಮೇಲೆ ಕಾಲದ ರಬ್ಬರ್ ಅಳಿಸಲಾಗದ ವಿಭಜನೆಯ ಗಾಯ ದಾಖಲಿಸಿದ ಮಾಂಟೊ ತುಂಬ ಕಾಡುತ್ತಾರೆ.